ಹುದುಗಿದ ಜೀವನ ಪ್ರೀತಿ ಮಾತ್ರ ನಿಬ್ಬೆರಗಾಗಿಸುವಂತಿದೆ.

ಕಥೆಗಾರನ ಮನೋಲೋಕದಲ್ಲಿ ಪ್ರೀತಿ, ಪ್ರೇಮ, ಕಾಮ, ದಾರಿದ್ರ್ಯ, ಹಸಿವು ಎಲ್ಲವೂ ಇರಬಹುದು. ಅದನ್ನು ಪಾತ್ರಗಳಲ್ಲಿ ಆರೋಪಿಸಿ ಓದುಗರ ಮನಮುಟ್ಟುವಂತೆ ಅಭಿವ್ಯಕ್ತಿಸುವುದೊಂದು ಅಸಾಮಾನ್ಯ ಕಲೆ. ಕಥೆ ಕೇವಲ ನಿರೂಪಣೆಯಾದರೆ ಪಾತ್ರವನ್ನು ವ್ಯಕ್ತಿತ್ವದೊಡನೆ ಕಟ್ಟಿಕೊಡುವ ವಿಧಾನವೊಂದು ಕೌಶಲ್ಯ. ಅದನ್ನು ಎಂ.ಟಿ. ಅವರು ತಮ್ಮ ಬರವಣಿಗೆಗಳಲ್ಲಿ ಕಲಾತ್ಮಕವಾಗಿ ಮಾಡಿದ್ದಾರೆ. ಅದು ನೋವಿನ ಹತಾಶೆಯ ಧ್ವನಿಯಾದುದೇ ಅಧಿಕ. ಬದುಕಿನ ಸಂದಿಗ್ಧ ಸ್ಥಿತಿಗತಿಗಳನ್ನು ಹಾಗೂ ಭಾವಗಳ ಸೂಕ್ಷ್ಮ ಎಳೆಗಳನ್ನು ಬಿಡಿ ಬಿಡಿಯಾಗಿ ಬಿಚ್ಚಿಡುವ ಅವರ ಕೆಲವು ಕಥೆಗಳಲ್ಲಿ ಕಥಾಂಶಗಳಿಗಿಂತ ಭಾವನಾತ್ಮಕ ಸಂಘರ್ಷಗಳೇ ಹೆಚ್ಚಿರುತ್ತವೆ. ವಾಸ್ತವದ ನೆಲೆಗಟ್ಟಿನಲ್ಲಿ ಹುಟ್ಟಿ ಬೆಳೆಯುವ ಅವರ ಕಥಾಪಾತ್ರಗಳಿಗೆ ಬದುಕಿನ ಬಗೆಗೆ ತೀವ್ರ ಕಾಳಜಿಯಿದೆ. ಅದರ ಪರಿಣಾಮದಿಂದ ಬದುಕು ಹೈರಾಣವಾಗುವುದನ್ನು ಮತ್ತೆ ಅದನ್ನು ಸರಿದಾರಿಗೆ ತರಲು ಪ್ರಯತ್ನಶೀಲರಾಗುವುದಿದೆ. ಇಂತಹ ಸಂದರ್ಭಗಳಲ್ಲಿ ಎಂ.ಟಿ.ಯವರ ಕಥೆಗಳು ಹೆಚ್ಚು ಭಾವುಕವಾಗಿರುವುದನ್ನೂ ಕಾಣಬಹುದು.

ಪರಿಸ್ಥಿತಿಯ ಕೂಸುಗಳಾಗಿ ಅನಿವಾರ್ಯವಾಗಿ ಪ್ರವರ್ತಿಸುವ ವ್ಯಕ್ತಿಗಳ ಒಳತೋಟಗಳನ್ನು ದಾಖಲಿಸುವ, ಗಂಡು ಹೆಣ್ಣಿನ ಸಂಬಂಧಗಳ ಸಂಕೀರ್ಣತೆಗಳಿಗೆ ಭಾಷ್ಯ ಬರೆಯುವ, ಕುಟುಂಬ, ಸಮಾಜದಲ್ಲಿನ ಅಸಹಾಯಕರ ಧ್ವನಿಯಾಗುವ ಎಂ.ಟಿ. ಕಥೆಗಳಿಗೆ ಓದುಗರನ್ನು ಆಪ್ತವಾಗಿ ಸೆಳೆಯುವ ಗುಣವಿದೆ. ಪಾತ್ರಗಳ ಮನೋವಿಕಾರಗಳನ್ನು ಹೃದಯ ತಟ್ಟುವಂತೆ ಚಿತ್ರಿಸುವುದೂ, ವಸ್ತು ವಾಚ್ಯವಾಗದೆ ಹೆಚ್ಚು ಧ್ವನ್ಯಾತ್ಮಕವಾಗಿ ಬರೆಯುವುದು, ಪ್ರತ್ಯಕ್ಷವಾಗಿ ಕಾಣುವ ಭೌತಿಕ ವಿವರಗಳನ್ನು ನೀಡದೆ, ಮನಸ್ಸಿನ ಆಳದಲ್ಲಿ ಹುದುಗಿದ ಭಾವನೆಗಳನ್ನು ಬೆದಕುವುದು ಎಂ.ಟಿ. ಅವರ ವೈಶಿಷ್ಟ್ಯ. ದೇಶ ವಿದೇಶಗಳನ್ನು ಸುತ್ತಾಡಿದ ಅನುಭವಗಳು ಕೃತಿಗಳಲ್ಲಿ ದಾಖಲಾದರೂ ಇವರ ಅನೇಕ ಪಾತ್ರಗಳು ತಾವು ಹುಟ್ಟಿ ಬೆಳೆದ ಕುಡಲೂರು ಗ್ರಾಮದಿಂದಲೇ ಒಡಮೂಡಿದವುಗಳು. ಅಲ್ಲಿಯ ನದಿ, ಕಾಡು, ಜನ, ಬಾವಿ ಇವುಗಳ ಹಿನ್ನೆಲೆಯಲ್ಲಿ ಪ್ರಾದೇಶಿಕವಾಗಿ ಗಟ್ಟಿಗೊಳ್ಳುತ್ತಾ ವ್ಯಕ್ತಿಯ ಮನೋವಿಕಾರಗಳು ಸಾರ್ವತ್ರಿಕವಾಗುವಂತೆಯೂ ಬರೆಯುವ ವೈಖರಿ ಎಂ.ಟಿ.ಯವರಿಗೇ ಅನನ್ಯವಾದುದು. ಕ್ಷುಲ್ಲಕವೆಂದು ನಿರ್ಲಕ್ಷಿಸಬಹುದಾದ ಹಲವು ವಸ್ತುಸ್ಥಿತಿಗಳು ವಾಸ್ತವದಲ್ಲಿ ಸಂವೇದನಾಶೀಲನಾದ ಒಬ್ಬ ಬರಹಗಾರನ ದೃಷ್ಟಿಯಲ್ಲಿ ಮೂರ್ತಗೊಂಡು ಹೇಗೆ ಪ್ರಾಧಾನ್ಯ ಪಡೆಯುತ್ತವೆ ಎಂಬುದಕ್ಕೆ ಅವರ ಕಥೆಗಳೇ ನಿದರ್ಶನಗಳು.

'ಕುಡಲೂರು ಎಂಬ ನನ್ನ ಪುಟ್ಟ ಪ್ರಪಂಚದಿಂದ ಬೇರಾಗಿ ನಿಲ್ಲಲು ನನಗೆ ಸಾಧ್ಯವಾಗದು. ಅದರ ನಾಲ್ಕು ಮೇರೆಗಳಾಚೆ ದಾಟುವುದಿಲ್ಲವೇ ಎಂದು ಕೇಳಬಹುದು. ಇಲ್ಲ, ವಿಭಿನ್ನವಾದ ಭೂಪ್ರದೇಶಗಳಲ್ಲಿ ನಾನು ಅಲೆದಾಡಿದ್ದಿದೆ. ಹಲವು ಬಾರಿ ಆದರೆ ಮತ್ತೆ ಮತ್ತೆ ನಾನು ಇಲ್ಲಿಗೇ ಹಿಂತಿರುಗಿ ಬರುತ್ತೇನೆ. ಇದೊಂದು ಮಿತಿಯೇ ಆಗಿರಬಹುದು. ಆದರೆ ಅರಿಯದ ಅದ್ಭುತಗಳನ್ನು ಗರ್ಭದಲ್ಲಿ ಸೇರಿಸಿಕೊಂಡಿರುವ ಅಗಾಧ ಸಮುದ್ರಕ್ಕಿಂತ ಅರಿಯುವ ನನ್ನ ನಿಳಾ ನದಿಯೇ ನನಗೆ ಪ್ರಿಯ' ಎಂದವರು ಬರೆದಿದ್ದಾರೆ.

ಏಕಾಂತ ಪಥಿಕನಾಗಿ ಅಲೆಯುವ ಕಥೆಗಾರನ ಮನಸ್ಸು ಸುತ್ತಮುತ್ತಲ ಆಗುಹೋಗುಗಳನ್ನು ತನ್ಮಯತೆಯಿಂದ ವೀಕ್ಷಿಸಿ ಮಾತಾಗಿ ಪರಿವರ್ತಿಸುತ್ತಿರುತ್ತದೆ. ಹಳ್ಳಿಯ ನಿಷ್ಕಳಂಕ ಬದುಕು, ಭಾವ ಎಂ.ಟಿ. ಅವರನ್ನು ಪ್ರಭಾವಿಸಿವೆ. ಭಾವನೆಗಳನ್ನು ಸಾಹಿತ್ಯ ಕುಸುಮವನ್ನಾಗಿಸುವಲ್ಲಿ ಇವರು ಓದುಗರ ನಂಬಿಕೆಯನ್ನು ಎಚ್ಚರದಿಂದ ನಿರ್ವಹಿಸಿದ್ದಾರೆ. ಅವರ ಲೇಖನಿ ಕಥಾಪಾತ್ರಗಳ ಮನಸ್ಸಿನ ಮೂಲಕ ಸಂಚರಿಸುತ್ತಿರುತ್ತದೆ. ಮಾನಸಿಕ ಪ್ರೇರಣೆಗಳ ಮೂರ್ತರೂಪಗಳಾಗಿ ಅವರ ಕಥೆಗಳು ಮೈಪಡೆದಿವೆ. ಇವುಗಳಲ್ಲಿ ಕಥಾಪಾತ್ರಗಳ ಆಂತರಿಕ ಸ್ವಗತ ಅವುಗಳ ಅನಿವಾರ್ಯ ಭಾಗಗಳೇ ಆಗಿವೆ. ಕಥಾಪಾತ್ರಗಳ ಮಾನಸಿಕ ಆವಿಷ್ಕಾರ ಹಾಗೂ ಓದುಗರ ಮನಸ್ಸಿನ ಪರಸ್ಪರ ತಾದಾತ್ಮ್ಯ ಇವರ ಕಥೆಗಳ ಮೂಲಕ ಏರ್ಪಡುತ್ತದೆ.

ನಾನು ಎಂ.ಟಿ. ಅವರ ಕಥೆಗಳನ್ನು ಸಮೀಪಿಸಿದ ಸಂದರ್ಭವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 1996ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಚಂದ್ರಶೇಖರ ಕಂಬಾರರು ಎಂ.ಟಿ. ಅವರ ಸಮಗ್ರ ಕಥಾ ಸಂಕಲನವೊಂದನ್ನು ಕೊಟ್ಟು, ಅದರಲ್ಲಿ ಎಂ.ಟಿ.